

ಹಗಲು ದರೋಡೆ ಮಾಡುವುದಿಲ್ಲ. ಅಷ್ಟರಮಟ್ಟಿಗೆ ಇದು ಗ್ರಾಹಕಸ್ನೇಹಿ ಧ್ವನಿಯಾಗಿದೆ. ಈ ಹಾಡುಹಕ್ಕಿಗಳು ಮಾರಾಟ ಮಾಡಿದ ನೆಲಗಡಲೆ ಪೊಟ್ಟಣದ ಗಾತ್ರಕ್ಕೆ ತಕ್ಕಷ್ಟು ಕಾಯಿ ಇಲ್ಲದಿರಬಹುದು, ಹಣ್ಣಿನಲ್ಲಿ ಹುಳವಿರಬಹುದು, ಕೆಲವು ಕೊಳೆತಿರಬಹುದು. ಆದರೆ ಇದೇನು ನಮ್ಮನ್ನು ಸುಲಿಗೆ ಮಾಡುವುದಿಲ್ಲ. ಇದು ನಮಗೆ ನಿರೀಕ್ಷಿತವಾಗಿರುವುದರಿಂದ ಮೋಸವೆನ್ನಿಸುವುದಿಲ್ಲ.

ಈ ನಿಲ್ದಾಣಗಳಲ್ಲಿ ವಿವಿಧ ಮಾರ್ಗದಲ್ಲಿ ಸಂಚರಿಸುವ ಬಸ್ಸಿಗೆ ಪಯಣಿಗರನ್ನು ಕರೆಯಲು ಬಳಸುವ ಕೂಗನ್ನು ನೀವು ಕೇಳಿರುತ್ತೀರಿ. ಇದು ವಿಭಿನ್ನವಾಗಿರುತ್ತದೆ. ಇವರು ತಾರಕ ಸ್ವರದಲ್ಲಿ ಕೂಗಿ ನಮ್ಮನ್ನು ಆಹ್ವಾನಿಸುತ್ತಾರೆ. ನನ್ನ ಸ್ನೇಹಿತರೊಬ್ಬರು ಹೇಳಿದ ಅನುಭವವನ್ನು ನಿಮಗೆ ಹೇಳಬೇಕು. ಅವರೊಮ್ಮೆ ನಿಲ್ದಾಣದ ಆವರಣದೊಳಗಿನ ಪೆಟ್ಟಿಗೆ ಅಂಗಡಿಯ ಮುಂದೆ ಚಹ ಹೀರುತ್ತ ನಿಂತಿದ್ದರು. ಆಗ ಬಸ್ಸಿನ ಬಳಿ ನಿಂತ ವ್ಯಕ್ತಿಯೊಬ್ಬರು 'ಇಳಕಲ್ ತುಂಬ ಕರಡಿ' ಎಂದು ತಾರಕ ಸ್ವರದಲ್ಲಿ ಕೂಗಲು ಶುರು ಮಾಡಿದರಂತೆ. ಇವರು ಗಾಬರಿಯಾಗಿ ಆಚೀಚೆ ನೋಡಿದರಂತೆ. ಆದರೆ ಅಲ್ಲಿನ ಜನರು ಸಹಜವಾಗಿ ಇದ್ದದ್ದು ಕಂಡು ವಿಚಾರಿಸಿದಾಗ ಅವು ಆ ಬಸ್ಸು ಸಂಚರಿಸುವ ಊರಿನ ಹೆಸರೆಂದು ತಿಳಿಯಿತಂತೆ. ಇಂತಹ ಎಷ್ಟೋ ತಮಾಷೆಯ ಪ್ರಸಂಗಗಳು ನಿಮಗೂ ಆಗಿರಬಹುದು.

ಮಾರಾಟಗಾರರು, ತಿರುಕರು, ಬಸ್ ನಿರ್ವಾಹಕರು, ಜನರ ಮಾತುಗಳು — ಇವೆಲ್ಲವೂ ಸೇರಿ ನಿಲ್ದಾಣಗಳಿಗೆ ವಿಭಿನ್ನ ಕಳೆ ತರುತ್ತವೆ. ಈ ನಾದಲೀಲೆಯಲ್ಲಿ ಲೋಕವ್ಯಾಪಾರದ ಹಲವು ಮಜಲುಗಳಿವೆ. ಆದರೆ ಈ ಹಾಡುಹಕ್ಕಿಗಳ ಕಲರವ ನಿಲ್ದಾಣದ ಶೋಭೆಯನ್ನು ಹೆಚ್ಚಿಸಿವೆಯೇ ಹೊರತು ಎಂದೂ ಯಾರಿಗೂ ಕಿರಿಕಿರಿಯಾಗಿಲ್ಲ. ಇದು ಈಚೆಗೆ ಕ್ರಮೇಣ ಕಡಿಮೆಯಾಗುತ್ತ ವಿನಾಶದ ಅಂಚಿಗೆ ಸರಿಯುತ್ತಿರುವ ವಿಷಾದವು ಆಗಾಗ ಮೂಡುತ್ತದೆ.

ಒಮ್ಮೆ ಉಡುಪಿಯಿಂದ ಬರುವ ಖಾಸಗಿ ಬಸ್ಸಿನಲ್ಲಿ ಆದ ಅನುಭವವೊಂದನ್ನು ನಿಮಗೆ ಹೇಳುವೆ. ವೃದ್ಧೆಯೊಬ್ಬರು ಬಸ್ಸು ಹತ್ತಿ ಸೀಟಿನಲ್ಲಿ ಕುಳಿತರು. ಅವರಿಗೆ ತಾನು ಇಳಿಯುವ ಊರು ಬಂದದ್ದು ತಿಳಿಯಲಿಲ್ಲ. ಈ ಹೈವೆ ಎಂಬ ವೇಗದ ಮಾಯೆ ಸೃಷ್ಟಿಸಿದ ಯಡವಟ್ಟಿದು. ಚೂರುಪಾರು ಮುಕ್ಕಾಗಿ ಉಳಿದ ಹಳೆಯ ಕಟ್ಟಡಗಳನ್ನು ಕಂಡ ಅಜ್ಜಿಗೆ ಬಸ್ಸು ಸಾಲಿಗ್ರಾಮ ದಾಟಿ ಕೋಟಕ್ಕೆ ಬಂದ ಅನುಮಾನ ಮೂಡಿರಬೇಕು. 'ಮಗ ಇನ್ನ ಸಾಲಿಗ್ರಾಮ ಬರಲಿಲ್ಯಾ?' ಎಂದು ಕಂಡಕ್ಟರ್ ಅನ್ನು ವಿಚಾರಿಸಿತು. ಅವನು ಅಸಹನೆಯಿಂದ 'ನೀವು ಎಂತ ನಿದ್ರಿ ಮಾಡಿರಾ? ಬಸ್ ವಾಪಸ್ಸು ಬಪ್ಪತ್ತಿಗೆ ಸಾಲಿಗ್ರಾಮ ಬತ್ತು ನಿದ್ರಿ ಮಾಡಿ' ಎಂದು ವ್ಯಂಗ್ಯವಾಡಿದ. 'ನಿಮಗೆ ಅಷ್ಟು ಗೊತ್ತಾತಿಲ್ಯಾ' ಎಂದು ದಬಾಯಿಸಿದ. ಅಜ್ಜಿ ಕೆರಳಿ 'ನಿಂಗೆ ಯಾವ ಊರ್ ಬಂದಿತೆಂದು ಕೂಗುಕೆ ಬಾಯಿಯಿಲ್ಲೇನಾ, ನೀನು ಯಾವ ಸೀಮೆ ಕಂಡಟ್ರು ಮಾರಾರ್ರೆ' ಎಂದು ಕೇಳಿದಾಗ ಕಂಡಕ್ಟರ್‌ನ ಮುಖ ಕಪ್ಪಿಟ್ಟಿತು. 'ಈಗ ನಂಗೆ ವಾಪಸ್ಸು ಹೋಪುಕೆ ನೀನೆ ಬಸ್ ಚಾರ್ಜ್ ಕೊಡು' ಎಂದು ಕಂಡಕ್ಟರನ ಬೆವರಿಳಿಸಿತು. ಅಜ್ಜಿಯ ಪರವಾಗಿ ಬಸ್ಸಿನ ಪಯಣಿಗರು ಧ್ವನಿಗೂಡಿಸಿದರು. ಇದು ಕಂಡಕ್ಟರ್ ಜಂಘಾಬಲವನ್ನು ಉಡುಗಿಸಿತು. ಮಾತಿಲ್ಲದೆ ವಾಪಸ್ಸು ಪಯಣದ ವೆಚ್ಚವನ್ನು ತೆತ್ತ ಬಸ್ಸಿನ ಕಂಡಕ್ಟರನ ಸೊಡ್ಡು ಕಂಡು ಖುಷಿಯಾಯಿತು. ಬಸ್ ಹತ್ತಿದಾಗಿನಿಂದ ಒಬ್ಬರಲ್ಲ ಒಬ್ಬ ಪ್ರಯಾಣಿಕರ ಜೊತೆಗೆ ಕ್ಯಾತೆ ತೆಗೆದು ಕಿರಿಕಿರಿ ಮಾಡಿ ಇಡೀ ಪಯಣವನ್ನೇ ಅಸಹನೀಯವಾಗಿಸಿದ್ದ. ಅಂತಹ ವ್ಯಕ್ತಿಯನ್ನು ಒಬ್ಬ ವೃದ್ಧೆ ಮಣ್ಣು ಮುಕ್ಕಿಸಿದ್ದು ಅನೇಕರ ಮೊಗದಲ್ಲಿ ಹರ್ಷ ಮೂಡಿಸಿತು.

ಹಲವು ಕಾಲಗಳಿಂದ ಅನೇಕರ ಬದುಕಿಗೆ ಆಸರೆಯಾದ ಈ ನಿಲ್ದಾಣಗಳ ಬಗೆಗೆ ನಮ್ಮ ಸಮಾಜಕ್ಕೆ ದಿವ್ಯ ನಿರ್ಲಕ್ಷ್ಯವಿದೆ. ಒಂದು ಶಾಲೆ ಸ್ಥಾಪನೆಯಾಗಿ ಇಪ್ಪತ್ತೈದು ವರ್ಷವಾದರೆ ಬೆಳ್ಳಿಹಬ್ಬ ಆಚರಿಸಿ ಸಂಭ್ರಮಿಸುತ್ತೇವೆ. ಆದರೆ ಶತಮಾನಗಳಷ್ಟು ಚರಿತ್ರೆಯನ್ನು ಹೊಂದಿದ ಯಾವ ನಿಲ್ದಾಣಗಳನ್ನು ನಾವು ಸ್ಮರಿಸಿ ಸಂಭ್ರಮಿಸಿಲ್ಲ. ನಮ್ಮ ಸಾಮಾಜಿಕ ವ್ಯಕ್ತಿತ್ವವನ್ನು ರೂಪಿಸಿದ, ಹಲವು ಸಂಬಂಧಗಳನ್ನು ಬೆಸೆದ, ಹಲವು ಅನುಭವಗಳನ್ನು ನೀಡಿದ ಈ ನಿಲ್ದಾಣಗಳನ್ನು ನಾವು ಸಂಭ್ರಮಿಸಬೇಕಿದೆ.

ಈ ನಿಲ್ದಾಣಗಳು ಈಚೆಗೆ ತಮ್ಮ ಹಿಂದಿನ ವೈಭವವನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತದೆ. ಮೌಲ್ಯಮಾಪನ ಕಾರ್ಯಕ್ಕೆಂದು ಮಂಗಳೂರಿಗೆ ಮುಂಜಾವಿಗೆ ಹೊರಟಿದ್ದೆ. ಉಡುಪಿಯ ಬಸ್ ನಿಲ್ದಾಣದಲ್ಲಿ ಕಂಡ ದೃಶ್ಯ ಕಣ್ಣಲ್ಲಿ ಹಾಗೇ ಇದೆ. ಆ ದೃಶ್ಯ ಇಂತಿದೆ. ನಿಲ್ದಾಣದ ಬೆಂಚಿನ ಮೇಲೆ ಕುಳಿತ ಜನರು ಧ್ಯಾನಸ್ಥ ಸಂತರಂತೆ ತಮ್ಮ ಕೈಯಲ್ಲಿನ ಮೊಬೈಲ್‌ಗಳ ವೀಕ್ಷಣೆಯಲ್ಲಿ ಮುಳುಗಿದ್ದರು. ಪಕ್ಕದಲ್ಲಿ ಯಾರು ಕುಳಿತಿದ್ದಾರೆ, ತಮ್ಮ ಎದುರು ನಡೆಯುತ್ತಿರುವ ಚಟುವಟಿಕೆಗಳೇನು ಎಂದು ಗಮನಿಸಿದೆ ತಮ್ಮದೇ ಸಂತಸದಲ್ಲಿ ಮುಳುಗಿದ್ದರು. ನಿಲ್ದಾಣದ ಸದ್ದು, ಬಸ್ಸಿನ ಹಾರನ್, ಯಾವುದೂ ಅವರ ಧ್ಯಾನಸ್ಥ ಸ್ಥಿತಿಗೆ ಭಂಗ ತಂದಿರಲಿಲ್ಲ. ಪಕ್ಕ ಕುಳಿತವರೊಂದಿಗೆ ಒಂದು ಮಾತಿನ ವಿನಿಮಯವೂ ಇಲ್ಲದ ಸ್ಥಿತಿ ಖೇದವನ್ನುಂಟು ಮಾಡಿತು. ಅಂದು ನಿಲ್ದಾಣವು ಸೂತಕದಿಂದ ಕೂಡಿದ ಸಾವಿನ ಮನೆಯಂತೆ ಭಾಸವಾಗಿ ದುಗುಡ ತುಂಬಿತು. ಈ ದೃಶ್ಯ ಈಚೆಗೆ ಎಲ್ಲೆಡೆ ಸಾಮಾನ್ಯವಾಗುತ್ತಿದೆ. ಮಾತೇ ಇಲ್ಲದೆ ಮೌನವೇ ಮೈವೆತ್ತ ನಿಲ್ದಾಣಗಳು ನಮ್ಮ ಸಮಾಜದ ಅನಾರೋಗ್ಯದ ಸಂಕೇತವೇ ಆಗಿವೆ.

ನಿಲ್ದಾಣಗಳ ತುಂಬಾ ಅನುರಣಿಸುತ್ತಿದ್ದ ಹಾಡುಹಕ್ಕಿಗಳ ಕೂಗು ಕಣ್ಮರೆಯಾಗುತ್ತಿದೆ. ಅದರ ಜಾಗವನ್ನು ಕಿರಿಚುವ ಎಫ್.ಎಂ. ರೇಡಿಯೊಗಳ ಧ್ವನಿ ಆಕ್ರಮಿಸಿದೆ. ಇದರ ಜೊತೆ ಖಾಸಗಿ ಸರ್ಕಾರಿ ಜಾಹೀರಾತುಗಳ ಸದ್ದು ಹಾಡುಹಕ್ಕಿಗಳ ನಿನಾದವನ್ನು ಮಂಕುಗೊಳಿಸಿರುವುದು ಸತ್ಯ. ಆದರೆ, ನಿಲ್ದಾಣದ ಕೊರಳು ಇನ್ನು ಪೂರ್ತಿಯಾಗಿ ದನಿಯನ್ನು ಕಳೆದುಕೊಂಡಿಲ್ಲ. ಸಮಕಾಲೀನ ರಾಜಕೀಯ ವಿದ್ಯಮಾನಗಳು, ಸ್ಥಳೀಯ ಆಗುಹೋಗುಗಳ ಚರ್ಚೆ ಕ್ಷೀಣವಾಗಿಯಾದರೂ ಗೋಚರಿಸುತ್ತಿದೆ. ನಿಲ್ದಾಣಗಳಲ್ಲಿ ಅಪರಿಚಿತರಿಂದ ಪೇಪರನ್ನು ತೆಗೆದುಕೊಂಡು ಓದುವ, ಪಕ್ಕದ ಅಪರಿಚಿತರ ಜೊತೆ ನಿರಾಳವಾಗಿ ಹರಟುವ ಮನೋಭಾವ ಹಿಂದಿನಷ್ಟು ದಟ್ಟವಾಗಿ ಕಾಣಿಸುತ್ತಿಲ್ಲ. ಇದು ಕಾಣದಿರುವುದಕ್ಕೆ ಹಲವು ಕಾರಣಗಳಿರಬಹುದು. ನಿಲ್ದಾಣಗಳಲ್ಲಿ ದನಿಯಿಲ್ಲದ ಮೂಕತನ ಆವರಿಸಲಾರದು ಎಂಬ ಭರವಸೆ ನನಗಿದೆ. ಹಾಗಾಗಿ ನಿಲ್ದಾಣಗಳ ಆಕರ್ಷಣೆ ನನಗೆ ಚೂರೂ ಕಮ್ಮಿಯಾಗಿಲ್ಲ. ನೋಡುವ ದೃಷ್ಟಿಯಿದ್ದರೆ, ಮೊಬೈಲ್ ಮಾರಿಯ ಆಲಿಂಗನಕ್ಕೆ ವಶವಾಗದಿದ್ದರೆ ಈ ನಿಲ್ದಾಣಗಳ ವಿರಾಟ್ ರೂಪ ಮೆಲ್ಲಗೆ ನಿಮ್ಮ ಕಣ್ಣೆದುರು ತೆರೆದುಕೊಳ್ಳುತ್ತದೆ. ಈ ಸುಖವನ್ನು ಅನುಭವಿಸಲು ನೀವು ನಿಲ್ದಾಣಗಳತ್ತ ಹೆಜ್ಜೆ ಹಾಕುವಿರಿ ಎಂಬ ನಂಬಿಕೆ ನನ್ನಲ್ಲಿ ದೃಢವಾಗಿದೆ.

**ಪ್ರತಿಕ್ರಿಯಿಸಿ: feedback@sudha.co.in**